ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 2390/25**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – 2

ದಿನಾಂಕಃ 04.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಚಂದ್ರಶೇಖರ |
| ತಂದೆಯ ಹೆಸರು | – ರಾಮೇಗೌಡ |
| ವಯಸ್ಸು | – 36 ವರ್ಷ |
| ವೃತ್ತಿ | – ಅಬಕಾರಿ ಚಾಲಕ , ಅಬಕಾರಿ ಉಪ ಆಯುಕ್ತರ ಕಚೇರಿ |
| ವಾಸಸ್ಥಳ | – ಮಡಿಕೇರಿ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ನಾನು ಜುಲೈ–2024 ರಿಂದ ಇಲ್ಲಿಯವರೆಗೆ ಅಬಕಾರಿ ಉಪ ಆಯಕ್ತರ ಕಚೇರಿ ಮಡಿಕೇರಿ ಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ–1, 3 , 4 ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ದಿಃ 22.04.2025 ರಂದು ನಾನು ಮತ್ತು ಚಾಸಾ–1 ರವರು ಸಂಪಾಜೆಯ ಅರಣ್ಯ ತನಿಖಾ ಠಾಣೆಯ ಬಳಿ ಗಸ್ತು ಮಾಡುತ್ತಿದ್ದಾಗ ಬೆಃ 6.00 ಗಂಟೆ ಸುಮಾರಿಗೆ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಚೆಂಬು ಗ್ರಾಮದಲ್ಲಿ ಆರೋಪಿ ಅವರ ತೋಟದಲ್ಲಿ, ಮನೆಯಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ಮದ್ಯವನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿಯ ಮೇರೆಗೆ, ನಾನು ಹಾಗೂ ಚಾಸಾ–1 ರವರು ಕಾರ್ಯ ಪ್ರವೃತ್ತರಾಗಿ ಆರೋಪಿಯ ಮನೆಯ ಬಳಿ ಬೆಃ 6.30 ಕ್ಕೆ ಹೋಗಿದ್ದು, ಆರೋಪಿಯ ಮನೆಯ ಬಳಿ ಯಾರೂ ಇರಲಿಲ್ಲ. ಆರೋಪಿ ಮನೆಯಲ್ಲಿ ಇದ್ದು, ಆತನಿಗೆ ದಾಳಿಯ ವಿಚಾರ ತಿಳಿಸಿ ಆರೋಪಿ ಮನೆ ಮತ್ತು ತೋಟವನ್ನು ಶೋಧನೆ ಮಾಡಿರುತ್ತೇವೆ. ಆ ಸಮಯದಲ್ಲಿ ನ್ಯಾಯಾಲಯದಿಂದ ಶೋಧನಾ

ಸಮುಚ್ಚಿತ್ತ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲದ ಕಾರಣ ಹಾಗೂ ಸಾಕ್ಷ್ಯ ನಾಶ ಆಗಬಹುದು ಎನ್ನುವ ಕಾರಣದಿಂದ ಅಬಕಾರಿ ಕಾಯ್ದೆ ಕಲಂ 54 ಕಲಂ 65 ರಡಿಯಲ್ಲಿ ಸ್ಥಳದಲ್ಲೇ ಶೋಧನಾ ಸಮುಚ್ಚಿತ್ತ ವಾರೆಂಟನ್ನು ಚಾಸಾ-1 ರವರು ತಯಾರಿಸಿ, ಪರಸ್ಪರ ಅಂಗಶೋಧನೆ ಮಾಡಿಕೊಂಡು ಆರೋಪಿ ಮನೆಯ ಒಳಗೆ ಹೋಗಿ ಶೋಧನೆ ಮಾಡಿದೆವು. ಶೋಧನೆ ಮಾಡಲಾಗಿ ಸದರಿ ಮನೆಯ ಅಡುಗೆ ಕೋಣೆಯಲ್ಲಿ ಸುಮಾರು 20 ಲೀ. ಸಾಮರ್ಥ್ಯದ ಕ್ಯಾನ್ ನಲ್ಲಿ 12 ಲೀಟರ್ ಗೇರು ಹಣ್ಣಿನ ಕಳ್ಳಬಟ್ಟಿ ಸಾರಾಯಿ ಹಾಗೂ ಒಂದು ಕಂದು ಬಣ್ಣದ ಸುಮಾರು 10 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ 2 ಲೀ. ಕಳ್ಳಬಟ್ಟಿ ಸಾರಾಯಿ ಇದ್ದಿದ್ದು ಕಂಡು ಬಂದಿತು. ಆರೋಪಿಯನ್ನು ವಿಚಾರ ಮಾಡಲಾಗಿ ತಾನೇ ಕಳ್ಳಬಟ್ಟಿಯನ್ನು ತಯಾರಿಸಿ ಮಾರಾಟ ಮಾಡಲು ಇಟ್ಟಿಕೊಂಡಿರುವುದಾಗಿ ತಿಳಿಸಿದನು. ದೊರೆತ ಕಳ್ಳಬಟ್ಟಿ ಸಾರಾಯಿಯ ಪೈಕಿ ತಲಾ 750 ಎಂ ಎಲ್ ನಷ್ಟು ರಾಸಾಯನಿಕ ಪರೀಕ್ಷೆಗೆಂದು ಮಾದರಿ ತೆಗೆದು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ, ದಾರದಿಂದ ಕಟ್ಟಿ ಅರಗನ್ನು ಹಾಕಿ ಇಲಾಖಾ ಮೊಹರು ಹಾಕಿ ಸೀಲು ಮಾಡಿ ಅಮಾನತು ಮಾಡಿಕೊಂಡಿರುತ್ತೇವೆ. ಬೆಃ 7.40 ರಿಂದ 8.10 ರವರೆಗೆ ಘಟನಾ ಸ್ಥಳದಲ್ಲಿ ಅಮಾನತ್ತು ಪಂಚನಾಮೆ ಮಾಡಲಾಯಿತು.

ಸದರಿ ಅಮಾನತ್ತು ಪಂಚನಾಮೆಯನ್ನು ನಾನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ರಾಸಾಯನಿಕ ಪರೀಕ್ಷೆಗೆಂದು ಅಮಾನತ್ತು ಪಡಿಸಿಕೊಂಡಿದ್ದ ತಲಾ 750 ಎಂ ಎಲ್ ನ ಕಳ್ಳಬಟ್ಟಿ ಸಾರಾಯಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು. ಮಾ-1 ಮತ್ತು ಮು. ಮಾ- 2 ಎಂದು ಗುರುತಿಸಲಾಯಿತು. ಉಳಿದ ಅಮಾನತ್ತು ಪಡಿಸಿಕೊಂಡ ಕಳ್ಳಬಟ್ಟಿ ಸರಾಯಿಯನ್ನು ಮುಂದಿನ ಕಾನೂನು ಕ್ರಮಕ್ಕಾಗಿ ಇಲಾಖಾ ವಶಕ್ಕೆ ಪಡೆಯಲಾಯಿತು, ನಂತರ ನಾಶ ಪಡಿಸಲಾಯಿತು.

ಸದರಿ ಶೋಧನಾ ಸಮುಚ್ಚಿತ್ತ ವಾರೆಂಟನ್ನು ನಾನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಮಾದರಿ ಸೀಲನ್ನು ನಾನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು

ನಿಪಿ–3 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ಅಮಾನತ್ತು ಮಹಜರು ಮಾಡುವ ಕಾಲಕ್ಕೆ ತೆಗೆದ ಫೋಟೋವನ್ನು ಕೂಡ ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ–4 ಎಂದು ಗುರುತಿಸಲಾಯಿತು. ದಿಃ 25.04.2025 ರಂದು ಮಾದರಿ ತೆಗೆದ ಕಳ್ಳಬಟ್ಟಿ ಸಾರಾಯಿಯನ್ನು ಬೆಂಗಳೂರಿನ ವಿಧಿ ವಿಜ್ಞಾನ ಕೇಂದ್ರಕ್ಕೆ ನಾನು ತೆಗೆದುಕೊಂಡು ಹೋಗಿ ನೀಡಿರುತ್ತೇನೆ. ದಿಃ 12.05.2025 ರಂದು ಎಫ್ ಎಸ್ ಎಲ್ ರಿಪೋರ್ಟನ್ನು ಬೆಂಗಳೂರಿನ ವಿಧಿ ವಿಜ್ಞಾನ ಕೇಂದ್ರದಿಂದ ಪಡೆದುಕೊಂಡು ಚಾಸಾ–4 ರವರಿಗೆ ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಎಫ್ ಎಸ್ ಎಲ್ ರಿಪೋರ್ಟ್ ಆಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–5 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಚಾಸಾ–4 ರವರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರಾದ ಶ್ರೀ. ಬಿ ಡಿ ಕೆ ರವರಿಂದಃ–

ಘಟನಾ ದಿನದಂದು ಮಾಹಿತಿ ಬರುವ ಮುಂಚೆ ನಮಗೆ ಆರೋಪಿಯ ಮನೆಯ ಬಗ್ಗೆ ಗೊತ್ತಿರಲಿಲ್ಲ. ಮಾಹಿತಿ ಬಂದಾಗ ಆರೋಪಿ ಮನೆಯ ಸ್ಥಿತಿಗತಿ ಬಗ್ಗೆ ನಮಗೆ ಗೊತ್ತಿರಲಿಲ್ಲ. ಆರೋಪಿ ಮನೆ ಗ್ರಾಮಾಂತರ ಪ್ರದೇಶದಲ್ಲಿ ಇದೆ ಎಂದರೆ ಸರಿ. ಆರೋಪಿ ಮನೆಯ ಅಕ್ಕಪಕ್ಕ ಆರೋಪಿಯ ಸಂಬಂಧಿಕರ ಮನೆ ಇದೆ ಎಂದರೆ ಸರಿಯಲ್ಲ. ಸಂಪಾಜೆಯಿಂದ ಆರೋಪಿಯ ಮನೆಗೆ ಸುಮಾರು 12 ಕಿ. ಮೀ. ಆಗುತ್ತದೆ. ಆರೋಪಿಯ ಮನೆಯವರೆಗೂ ನಮ್ಮ ಇಲಾಖಾ ವಾಹನ ಹೋಗುತ್ತದೆ. ನಾನು ಹಾಗೂ ಚಾಸಾ–1 ರವರು ಆರೋಪಿ ಮನೆಗೆ ದಾಳಿಗೆ ಹೋದಾಗ ಮಫ್ತಿಯಲ್ಲಿ ಇದ್ದೆವು ಹಾಗೂ ನಮ್ಮ ಇಲಾಖಾ ವಾಹನದಲ್ಲಿ ಹೋಗಿದ್ದೆವು. ಆರೋಪಿ ಮನೆಯಿಂದ 5 ಅಡಿ ದೂರದಲ್ಲಿ ನಮ್ಮ ವಾಹನವನ್ ನುನಿಲ್ಲಿಸಿಕೊಂಡಿದ್ದೆವು. ನಮ್ಮನ್ನು ನೋಡಿ ಆರೋಪಿ ಓಡಿ ಹೋಗುವ ಪ್ರಯತ್ನ ಮಾಡಲಿಲ್ಲ. ದಾಳಿಯ ಸಮಯದಲ್ಲಿ ಆರೋಪಿ , ಆರೋಪಿಯ ಹೆಂಡತಿ ಹಾಗೂ ಮಕ್ಕಳು ಇದ್ದರು. ಆರೋಪಿಯ ಮನೆಯಲ್ಲಿ ಎರಡು ಕೋಣೆಗಳು ಇದ್ದವು. ಸುಮಾರು ಒಂದು ಮುಕ್ಕಾಲು ಗಂಟೆಯ ಕಾಲ ನಾವು ಆರೋಪಿಯ ಮನೆಯ ಹತ್ತಿರ ಕ್ರಮ ಜರುಗಿಸಿರುತ್ತೇವೆ. ಆ ಸಮಯದಲ್ಲಿ ಅಕ್ಕಪಕ್ಕದವರು

ಯಾರೂ ಇರಲಿಲ್ಲ. ದಾಳಿಗೆ ಹೋದ ಸಮಯದಲ್ಲಿ ನಾವು ಇಲಾಖಾ ಕ್ಯಾಮರಾವನ್ನು ತೆಗೆದುಕೊಂಡು ಹೋಗಿರಲಿಲ್ಲ, ನಿಪಿ–4 ಫೋಟೋವನ್ನು ನಾನು ನನ್ನ ಮೊಬೈಲ್ ನಲ್ಲಿ ತೆಗೆದಿರುತ್ತೇನೆ. ಸದರಿ ಮನೆ ಆರೋಪಿಗೆ ಸೇರಿದ್ದು ಎಂದು ಚಾಸಾ–1 ರವರು ಖಾತ್ರಿ ಪಡಿಸಿಕೊಂಡಿರುತ್ತಾರೆ. ಆರೋಪಿಯ ಮನೆಯಲ್ಲಿ ದೊರೆತ ಮದ್ಯವು ಗೇರು ಕಳ್ಳಬಟ್ಟಿ ಸಾರಾಯಿ ಎಂದು ಚಾಸಾ–1 ರವರೇ ಕಂಡು ಹಿಡಿದರು. ನಿಪಿ–1 ಮಹಜರನ್ನು ಚಾಸಾ–1 ರವರು ಬರೆದಿರುತ್ತಾರೆ. ಘಟನಾ ದಿನದಂದು ನಾವು ಆರೋಪಿಯ ಮನೆಯಲ್ಲಿದಾಳಿ ಮಾಡಿಲ್ಲ, ಆರೋಪಿಯ ಮನೆಯಲ್ಲಿ ಕಳ್ಳಬಟ್ಟಿ ಸಾರಾಯಿಯನ್ನು ಅಮಾನತ್ತು ಪಡಿಸಿಕೊಂಡಿಲ್ಲ, ಮು. ಮಾ. 1 ಮತ್ತು 2 ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–4 ಫೋಟೋವನ್ನು ಕೂಡ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ದಾಖಲೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಕೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.